**ದಿನಾಂಕಃ 07.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ಸದರಿ ಸ್ಥಳದಲ್ಲಿ ದೊರಕಿದ 15 ಖಾಲಿ ಪ್ಲಾಸ್ಟಿಕ್ ಚೀಲಗಳ ಮೇಲೆ ಚಾಸಾ-1 ರವರು ಎ-1 ರಿಂದ ಎ15 ಎಂದು ನೀಲಿ ಶಾಹಿಯ ಲೇಖನಿಯಲ್ಲಿ ನಮೂದಿಸಿರುತ್ತಾರೆ. ಅದೇ ಸಂದರ್ಭದಲ್ಲಿ ದೊರೆತ 100 ಖಾಲಿ ಗೋಣಿಚೀಲಗಳ ಮೇಲೆ ಚಾಸಾ-1 ರವರು ಬಿ-1 ರಿಂದ ಬಿ-100 ಎಂದು ನೀಲಿ ಶಾಹಿಯ ಲೇಖನಿಯಲ್ಲಿ ನಮೂದಿಸಿರುತ್ತಾರೆ. ಅದೇ ಸಂದರ್ಭದಲ್ಲಿ ಒಟ್ಟು 8 ಭಾವಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ನಂತರ ಚಾಸಾ-1 ರಿಂದ 3 ರವರ ಸಮಕ್ಷಮ ಅಲ್ಲಿಯೇ ಇದ್ದ ಅಕ್ಕಿ ತುಂಬಿದ ಲಾರಿಯನ್ನು ತಪಾಸಣೆ ಮಾಡಲಾಗಿ ಸದರಿ ಲಾರಿಯಲ್ಲಿ ಒಟ್ಟು 300 ಅಕ್ಕಿ ತುಂಬಿದ ಚೀಲಗಳು ಇರುತ್ತವೆ. ಸದರಿ ಲಾರಿಯನ್ನು ಟಾರ್ಪಲ್ ನಲ್ಲಿ ಮುಚ್ಚಲಾಗಿದ್ದು, ಅದನ್ನು ತೆಗೆದು ನೋಡಲಾಗಿ ತಲಾ 50 ಕೆ ಜಿಯ 300 ಅಕ್ಕಿ ಚೀಲಗಳು ಸದರಿ ಲಾರಿಯಲ್ಲಿದ್ದದ್ದು ಕಂಡು ಬಂತು, ಅವುಗಳನ್ನು ಚಾಸಾ-1 ರವರು ನೀಲಿ ಶಾಹಿಯ ಲೇಖನಿಯಿಂದ ಸದರಿ 300 ಅಕ್ಕಿ ತುಂಬಿದ 50 ಕೆ ಜಿಯ ಚೀಲಗಳ ಮೇಲೆ ಡಬ್ಲ್ಯೂ-1 ರಿಂದ ಡಬ್ಲ್ಯೂ-300 ವರೆಗೆ ನಮೂದಿಸಿದರು. ನಂತರ ಸದರಿ 300 ಚೀಲಗಳಲ್ಲಿ ಇದ್ದ ಅಕ್ಕಿಯನ್ನು ಎಫ್ ಎಸ್ ಎಲ್ ಪರೀಕ್ಷೆಗೆ ಕಳುಹಿಸುವ ಉದ್ದೇಶದಿಂದ ಪ್ರತಿ ಚೀಲದಿಂದ 25 ಗ್ರಾಂ ನಷ್ಟು ಅಕ್ಕಿಯನ್ನು ಮಾದರಿ ಪರೀಕ್ಷೆಗಾಗಿ ತೆಗೆದುಕೊಂಡು ಸದರಿ ಅಕ್ಕಿಯನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಅದನ್ನು ಅಜಮಾಯಿಸಿ ಮಾಡಿಕೊಂಡು ಆರ್ ಎಂಬ ಅಕ್ಷರದಿಂದ ಸೀಲು ಹಾಕಿ ನನ್ನ ಮತ್ತು ಚಾಸಾ-1 ರಿಂದ 3 ರವರ ಸಹಿಗಳನ್ನು ಚೀಟಿಗಳ ಮೇಲೆ ಪಡೆದುಕೊಂಡು ಸದರಿ ಚೀಟಿಯನ್ನು ಮಾದರಿ ಅಕ್ಕಿಯನ್ನು ಸಂಗ್ರಹಿಸಿದ ಬಿಳಿ ಬಟ್ಟೆಯ ಚೀಲಕ್ಕೆ ಅಂಟಿಸಿದೆವು. ಸದರಿ ಸ್ಥಳದಲ್ಲಿಯೇ ದೊರೆತ ಎಲೆಕ್ಟ್ರಾನಿಕ್ ತೂಕದ ಯಂತ್ರ, ಎಲೆಕ್ಟ್ರಾನಿಕ್ ಹೊಲಿಗೆ ಯಂತ್ರ, ಎಲೆಕ್ಟ್ರಾನಿಕ್ ಜಂಕ್ಷನ್ ಬಾಕ್ಸನ್ನು ಅಮಾಲಿಗಳು ನೀಡಿದ ಮಾಹಿತಿಯ ಮೇರೆಗೆ ಚಾಸಾ-1 ರಿಂದ 3 ರವರ ಸಮಕ್ಷಮ ಜಪ್ತು ಮಾಡಿಕೊಂಡಿರುತ್ತೇವೆ. ಅದೇ ಸಂದರ್ಭದಲ್ಲಿ ಭಾವಚಿತ್ರವನ್ನು ತೆಗೆದುಕೊಳ್ಳಲಾಯಿತು. ಸದರಿ ಮಹಜರನ್ನು ಅದೇ ದಿನ ಸ್ಥಳದಲ್ಲಿಯೇ ಬೆಳಗ್ಗೆ 11 ರಿಂದ ಸಂಜೆ 5.00 ಗಂಟೆಯವರೆಗೆ ದಾಖಲಿಸಿಕೊಂಡಿರುತ್ತೇನೆ. ಈಗ ಸಾಕ್ಷಿಯು ಸದರಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-1 ರಂತೆ ನಿಶಾನೆಗೊಂಡಿರುತ್ತದೆ, ಅದರಲ್ಲಿರುವ

ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಇ) ಎಂದು ಗುರುತಿಸಲಾಯಿತು. ಅದೇ ಸಂದರ್ಭದಲ್ಲಿ ಭಾವಚಿತ್ರವನ್ನು ಸಹ ತೆಗೆದುಕೊಂಡಿರುತ್ತೇವೆ. ಈಗ ಸಾಕ್ಷಿ 10 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವು ಈಗಾಗಲೇ ನಿಪಿ-2 ರಿಂದ 11 ಎಂದು ನಿಶಾನೆಗೊಂಡಿರುತ್ತವೆ. ಈಗ ಸಾಕ್ಷಿಯು ಸದರಿ ಭಾವಚಿತ್ರಗಳನ್ನು ತೆಗೆದ ಬಗ್ಗೆ ದೃಢೀಕರಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-31 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-31(ಎ) ಎಂದು ಗುರುತಿಸಲಾಯಿತು.

ಸದರಿ ಸ್ಥಳ ಮತ್ತು ಜಪ್ತು ಪಂಚನಾಮೆಗೆ ಮಹಜರ್ ಸಾಕ್ಷಿದಾರರಾದ ಚಾಸಾ-1 ರಿಂದ 9 ರವರುಗಳ ಸಹಿಗಳನ್ನು ಸ್ಥಳದಲ್ಲಿಯೇ ಪಡೆದುಕೊಂಡಿರುತ್ತೇನೆ. ಸದರಿ ಪಂಚನಾಮೆಗೆ ನಮ್ಮ ಸಿಬ್ಬಂದಿಗಳಾದ ಚಾಸಾ-23 ರಿಂದ 31 ರವರುಗಳ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಲಾರಿ ಮತ್ತು ಲಾರಿಯೊಳಗಿದ್ದ ಅಕ್ಕಿಯನ್ನು ಜಪ್ತು ಮಾಡಿಕೊಂಡ ಬಗ್ಗೆ ಲಾರಿ ಚಾಲಕ ಮತ್ತು ಮಾಲೀಕರಾದ ಚಾಸಾ-9 ರವರಿಗೆ ನೋಟೀಸು ನೀಡಿರುತ್ತೇನೆ. ಸದರಿ ಸ್ಥಳದಲ್ಲಿ ದೊರೆತ ಒಟ್ಟು 451 ಅಕ್ಕಿ ಚೀಲಗಳು, ಎರಡು ಲಾರಿಗಳು, 115 ಖಾಲಿ ಚೀಲಗಳು ಮತ್ತು ಎಲೆಕ್ಟ್ರಾನಿಕ್ ತೂಕದ ಯಂತ್ರ, ಎಲೆಕ್ಟ್ರಾನಿಕ್ ಹೊಲಿಗೆ ಯಂತ್ರ, ಎಲೆಕ್ಟ್ರಾನಿಕ್ ಜಂಕ್ಷನ್ ಬಾಕ್ಸನ್ನು ತೆಗೆದುಕೊಂಡು ಚಾಸಾ-1 ರಿಂದ 3 ರವರು ನ ರಾ ಪುರ ಪೊಲೀಸ್ ಠಾಣೆಗೆ ಆಗಮಿಸಿ ಅಲ್ಲಿ ಚಾಸಾ-1 ರವರು ದೂರು ತಯಾರಿಸಿ ಚಾಸಾ-32 ರವರಿಗೆ ಲಿಖಿತವಾಗಿ ನೀಡಿದರು. ನಂತರ ಪ್ರಕರಣವು ಘೋರ ಪ್ರಕರಣ ಆದ್ದರಿಂದ ಚಾಸಾ-32 ರವರು ಮುಂದಿನ ತನಿಖೆಗಾಗಿ ಕಡತವನ್ನು ನನಗೆ ಹಸ್ತಾಂತರಿಸಿರುತ್ತಾರೆ.

ದಿನಾಂಕಃ 23.04.2018 ರಂದು ಸಾಕ್ಷಿದಾರರಾದ ಚಾಸಾ-1, 4 ರಿಂದ 9 , ಚಾಸಾ-23 ರಿಂದ 31 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 04.05.2018 ರಂದು ಈ ಪ್ರಕರಣದಲ್ಲಿ ಜಪ್ತು ಮಾಡಿಕೊಂಡ ವಾಹನಗಳು ಮತ್ತು ಅಕ್ಕಿಯನ್ನು ಸ್ವಾಧೀನಾನುಭವ ಪಡೆದುಕೊಳ್ಳಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ರವರಿಗೆ ಮನವಿ ಪತ್ರ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-32, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು. ದಿನಾಂಕಃ 10.05.2018 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ರವರು ನೀಡಿರುವ ಪತ್ರವನ್ನು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ಸಾಕ್ಷಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-33, ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ತದನಂತರ ದಿನಾಂಕಃ 16.05.2018 ರಂದು ಅಕ್ಕಿ ಮತ್ತು ಜಪ್ತು ಮಾಡಿಕೊಂಡ ವಸ್ತುಗಳನ್ನು ವಶಕ್ಕೆ ಪಡೆದುಕೊಳ್ಳುವಂತೆ ತಹಶೀಲ್ದಾರ್ ನ ರಾ ಪುರ ರವರಿಗೆ ಪತ್ರ ಬರೆದಿರುತ್ತೇನೆ. ಸಾಕ್ಷಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-

34, ಸಾಕ್ಷಿಯ ಸಹಿಯನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಸದರಿ ಪತ್ರದಂತೆ ಜಪ್ತು ಮಾಡಿಕೊಂಡ ವಾಹನಗಳು ಮತ್ತು ಅಕ್ಕಿಯನ್ನು ನ ರಾ ಪುರ ತಾಲ್ಲೂಕಿನ ತಹಶೀಲ್ದಾರ್ ರವರು ಕಳುಹಿಸಿಕೊಟ್ಟಿದ್ದ ಚಾಸಾ-11 ರವರ ಸ್ವಾಧೀನಕ್ಕೆ ನೀಡಿರುತ್ತೇನೆ. ತದನಂತರ ವಾಹನಗಳನ್ನು ನ ರಾ ಪುರ ಪೊಲೀಸ್ ಠಾಣಾ ಆವರಣದಲ್ಲಿ ತಂದು ನಿಲ್ಲಿಸಿರುತ್ತೇನೆ.

ದಿನಾಂಕಃ 30.05.2018 ರಂದು ತಹಶೀಲ್ದಾರ್ ರವರು ಸದರಿ ಅಕ್ಕಿಯನ್ನು ಸ್ವೀಕರಿಸಿದ ಬಗ್ಗೆ ಮತ್ತು ಆ ಸಂದರ್ಭದಲ್ಲಿ ಜರುಗಿಸಿದ ಮಹಜರನ್ನು ಮತ್ತು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರವನ್ನು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ಸದರಿ ಪತ್ರಗಳು ಮೂಲ ದಾಖಲೆಗಳಾಗದ ಕಾರಣ ಮತ್ತು ಸದರಿ ದಾಖಲೆಗಳು ಪರಿಪೂರ್ಣವಾಗಿ ಮುದ್ರಣವಿಲ್ಲದ ಕಾರಣ ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ಆರೋಪಿ ಪರ ವಕೀಲರ ತಕಾರಾರು ಹೇಳಿರುತ್ತಾರೆ. ತಕರಾರನ್ನು ಪುರಸ್ಕರಿಸಿ ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ. ದಿನಾಂಕಃ 17.05.2018 ರಂದು ಪ್ರಕರಣದ ಆರೋಪಿ ನಿರೀಕ್ಷಣಾ ಜಾಮೀನಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿಗೆ ನೋಟೀಸನ್ನು ನೀಡಿದ್ದು ಆರೋಪಿತರ ಪ್ರತ್ಯುತ್ತರವನ್ನು ಸಹ ಪಡೆದುಕೊಂಡಿರುತ್ತೇನೆ.

ದಿನಾಂಕಃ 18.05.2018 ರಂದು ಚಾಸಾ-13 ರವರಿಗೆ ಆರೋಪಿತರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಪಡೆದುಕೊಂಡಿರುವ ಪರವಾನಗಿಯ ಬಗ್ಗೆ ಮಾಹಿತಿ ನೀಡುವಂತೆ ಪತ್ರ ಬರೆದಿರುತ್ತೇನೆ. ಸಾಕ್ಷಿ ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು 35, ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ಸದರಿ ಚಾಸಾ-13 ರವರು ದಿನಾಂಕಃ 23.05.2018 ರಂದು ನೀಡಿದ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿಯವರು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-20(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 18.05.2018 ರಂದು ಚಾಸಾ-12 ರವರಿಗೆ ಕೃತ್ಯ ಸ್ಥಳದ ದಾಖಲೆ ನೀಡುವಂತೆ ಕೋರಿ ಪತ್ರ ಬರೆದಿರುತ್ತೇನೆ. ಸಾಕ್ಷಿ ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-36, ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು. ಚಾಸಾ-12 ರವರು ದಿನಾಂಕಃ 19.05.2018 ರಂದು ವರದಿ ಮತ್ತು ದಾಖಲೆ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ವರದಿ ಮತ್ತು ಅಸೆಸ್ಮೆಂಟ್ ದಾಖಲೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-37, ಸಾಕ್ಷಿಯ ಸಹಿಯನ್ನು ನಿಪಿ-37(ಎ) ಎಂದು ಗುರುತಿಸಲಾಯಿತು.

ದಿನಾಂಕಃ 02.06.2018 ರಂದು ಆಹಾರ ನಿರೀಕ್ಷಕರು, ಕೊಪ್ಪ ತಾಲ್ಲೂಕು ಮತ್ತು ಶೃಂಗೇರಿ ತಾಲ್ಲೂಕು ರವರುಗಳಿಗೆ ಪತ್ರ ಬರೆದು ತಮ್ಮ ತಾಲ್ಲೂಕುಗಳಲ್ಲಿ ಯಾವುದಾದರೂ ಅಕ್ಕಿ ಕಳ್ಳತನವಾಗಿರುವ ಅಥವಾ ದುರುಪಯೋಗವಾಗಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಿ ಪತ್ರ ಬರೆದಿರುತ್ತೇನೆ. ಸಾಕ್ಷಿ ಪತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-38 ಮತ್ತು 39, ಸಾಕ್ಷಿಯ ಸಹಿಗಳನ್ನು ನಿಪಿ-38(ಎ) ಮತ್ತು 39(ಎ) ಎಂದು ಗುರುತಿಸಲಾಯಿತು. ದಿನಾಂಕಃ 26.06.2018 ರಂದು ತಹಶೀಲ್ದಾರ್, ಕೊಪ್ಪ ರವರು ನೀಡಿರುವ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿ ಈಗಾಗಲೇ ಆರೋಪಿ ಪರ ವಕೀಲರ ಒಪ್ಪಿಗೆ ಮೇರೆಗೆ ಈಗಾಗಲೇ ನಿಪಿ-28 ಎಂದು, ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ದಿನಾಂಕಃ 27.06.2018 ರಂದು ತಹಶೀಲ್ದಾರ್, ಶೃಂಗೇರಿ ರವರು ನೀಡಿರುವ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿ ಈಗಾಗಲೇ ಆರೋಪಿ ಪರ ವಕೀಲರ ಒಪ್ಪಿಗೆ ಮೇರೆಗೆ ಈಗಾಗಲೇ ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು.

ದಿನಾಂಕಃ 02.06.2018 ರಂದು ಚಾಸಾ-16 ರಿಂದ 22 ರವರುಗಳಿಗೆ ಪತ್ರ ಬರೆದು ತಮ್ಮ ಸಂಘ-ಸಂಸ್ಥೆಗಳಲ್ಲಿ ಯಾವುದಾದರೂ ಅಕ್ಕಿ ಕಳ್ಳತನವಾಗಿರುವ ಅಥವಾ ದುರುಪಯೋಗವಾಗಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಿ ಪತ್ರ ಬರೆದಿರುತ್ತೇನೆ. ಸಾಕ್ಷಿ ಒಟ್ಟು 6 ಪತ್ರಗಳನ್ನು ನೋಡಿ ಗುರುತಿಸಿದ್ದು, ಕ್ರಮವಾಗಿ ಅವುಗಳನ್ನು ನಿಪಿ-40 ರಿಂದ 45 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-40(ಎ) ರಿಂದ 45(ಎ) ಎಂದು ಗುರುತಿಸಲಾಯಿತು. ಚಾಸಾ-16 ರಿಂದ 22 ರವರು ತಮ್ಮ ಸಂಘ-ಸಂಸ್ಥೆಗಳಲ್ಲಿ ಯಾವುದೇ ಅಕ್ಕಿ ಕಳ್ಳತನವಾಗಿರುವುದಿಲ್ಲ ಮತ್ತು ದುರುಪಯೋಗವಾಗಿರುವುದಿಲ್ಲ ಎಂದು ವರದಿ ನೀಡಿದ್ದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಿಪಿ-41 ಕ್ಕೆ ಸ್ವೀಕರಿಸಿದ ಪ್ರತ್ಯುತ್ತರವನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದೆ. ನಿಪಿ-42 ಕ್ಕೆ ಸ್ವೀಕರಿಸಿದ ಪ್ರತ್ಯುತ್ತರವನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದೆ. ನಿಪಿ-43 ಕ್ಕೆ ಸ್ವೀಕರಿಸಿದ ಪ್ರತ್ಯುತ್ತರವನ್ನು ಈಗಾಗಲೇ ನಿಪಿ-25 ಎಂದು ಗುರುತಿಸಲಾಗಿದೆ. ನಿಪಿ-44 ಕ್ಕೆ ಸ್ವೀಕರಿಸಿದ ಪ್ರತ್ಯುತ್ತರವನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದೆ. ನಿಪಿ-45 ಕ್ಕೆ ಸ್ವೀಕರಿಸಿದ ಪ್ರತ್ಯುತ್ತರವನ್ನು ಈಗಾಗಲೇ ನಿಪಿ-27 ಎಂದು ಗುರುತಿಸಲಾಗಿದೆ. ಸಾಕ್ಷಿಯು ಅದೇ ದಿನಾಂಕದಂದು ಚಾಸಾ-18 ರವರಿಗೂ ಸಹ ಈ ಬಗ್ಗೆ ಪತ್ರ ಬರೆದಿದ್ದು, ಸದರಿ ಪತ್ರವನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು

ನೋಡಿ ಗುರುತಿಸಿದ್ದು ಅದನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ಚಾಸಾ-18 ರವರು ನೀಡಿರುವ ಪ್ರತ್ಯುತ್ತರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-22 ಎಂದು ನಿಶಾನೆಗೊಂಡಿರುತ್ತದೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**